**ದಿನಾಂಕ 09.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಪ್ರತಿವಾದಿಯರ ಪರ ಜಿ ಎಂ **ವಕೀಲರವರಿಂದಃ**

ವಾದಿಯು ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ವಾದಿಯು ನನ್ನ ಸಂಬಂಧಿ ಎಂದರೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿಯರಿಬ್ಬರು ನನ್ನ ಸಂಬಂಧಿಕರು.

2. ಈ ದಾವೆಯನ್ನು ವಾದಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿ ಈ ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ಸೀತಾರಾಮಯ್ಯನವರಿಗೆ ಸೇರಿತ್ತು. ದಾವಾ ಸ್ವತ್ತು ಮೂಲತಃ ಅಂಕದೇವರ ಗುಡಿಗೆ ಸೇರಿದ ಸ್ವತ್ತು ಎಂದರೆ ಸರಿ.

ಕೃಷ್ಣೇಗೌಡ
ಪಿ.**ಡಬ್ಲ್ಯೂ-2**

ಅಂಕದೇವರ ಗುಡಿಗೆ ಸೇರಿರುವ ಸ್ವತ್ತು ಸುಮಾರು 3 ಎಕರೆ ಇರಬಹುದು. ದಾವಾ ಸ್ವತ್ತಿನಲ್ಲಿ ಸಾರ್ವಜನಿಕರು ಓಡಾಡುವ ರಸ್ತೆ ಇತ್ತು ಎಂದರೆ ಸಾಕ್ಷಿಯು ದಾವಾ ಸ್ವತ್ತಿನ ಪಕ್ಕದಲ್ಲಿ ಓಡಾಡುವ ರಸ್ತೆ ಇತ್ತು ಎಂದು ನುಡಿದರು. ಈಗಲೂ ಸಹಾ ಸದರಿ ರಸ್ತೆ ಅಸ್ತಿತ್ವದಲ್ಲಿದೆ ಎಂದರೆ ಸರಿ. ಸದರಿ ರಸ್ತೆಯ ಪಕ್ಕದಲ್ಲಿ ಪ್ರತಿವಾದಿಯರಿಗೆ ಸೇರಿರುವ ಸ್ವತ್ತು ಇದೆ ಎಂದರೆ ಸರಿ. ಸದರಿ ರಸ್ತೆಯನ್ನು ಪ್ರತಿವಾದಿಯರು ಉಪಯೋಗಿಸುತ್ತಿದ್ದಾರೆ ಎಂದರೆ ಸಾಕ್ಷಿ ಜನರು ಸಹಾ ಓಡಾಡುತ್ತಿದ್ದಾರೆ ಎಂದು ನುಡಿದರು. ಸದರಿ ರಸ್ತೆಯನ್ನು ಗ್ರಾಮಸ್ಥರು ಅವರವರ ಕೃಷಿ ಜಮೀಗಳಿಗೆ ಹೋಗಲು ಉಪಯೋಗಿಸುತ್ತಾರೆ ಎಂದರೆ ಸರಿ. ನಾನು ಚಿಕ್ಕಂದಿನಿಂದಲೂ ಸದರಿ ರಸ್ತೆ ಇರುತ್ತದೆ. ಈ ದಾವಾ ಸ್ವತ್ತನ್ನು ವಾದಿಯರು ಖರೀದಿ ಮಾಡುವ ಪೂರ್ವದಿಂದಲೂ ರಸ್ತೆ ಇತ್ತು ಎಂದರೆ ಸರಿ.

3. ದಾವಾ ಸ್ವತ್ತಿನಲ್ಲಿ ರಸ್ತೆ ಇದ್ದರೂ ಸಹಾ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಗ್ರಾಮದ ನಕ್ಷೆಯನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಆರ್ ಟಿ ಸಿ ಯನ್ನು ನಾನು ನೋಡಿರುವುದಿಲ್ಲ. ಆರ್ ಟಿ ಸಿ ಯಲ್ಲಿ ದಾವಾ ಸ್ವತ್ತಿನಲ್ಲಿ ಮರಗಳು ಇರುವ ಬಗ್ಗೆ ಉಲ್ಲೇಖವಾಗಿರುವುದಿಲ್ಲ ಎಂದರೆ ಸಾಕ್ಷಿಯು ಮರಗಳನ್ನು ಈಗ ಕಟಾವು ಮಾಡಿರುತ್ತಾರೆ ಎಂದು ನುಡಿದರು. 1 ವರ್ಷಕ್ಕಿಂತ ಮೊದಲೇ ಮರಗಳನ್ನು ಕಟಾವು ಮಾಡಿರುತ್ತಾರೆ.

4. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಗ್ರಾಮ ನಕ್ಷೆಯ ಪ್ರಕಾರ ದಾವಾ ಸ್ವತ್ತಿನ ಮಧ್ಯಭಾಗದಲ್ಲಿ ರಸ್ತೆ ಹಾದು ಹೋಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಪ್ರತಿವಾದಿಯ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ.

ಕೃಷ್ಣೇಗೌಡ
ಪಿ.**ಡಬ್ಲ್ಯೂ-2**

ದಾವಾ ಸ್ವತ್ತಿನ ಬಗ್ಗೆ ಸರ್ವೆ ನಂಬರ ಮತ್ತು ರಸ್ತೆಯ ಬಗ್ಗೆ ನನಗೇನೂ ಗೊತ್ತಿಲ್ಲದೇ ಇದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ವಾದಿ ಪರ ಮುಂದುವರಿದ ವಿಚಾರಣೆ ಇಲ್ಲ ಎಂದು ನುಡಿದರು.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ